ವಿಶ್ವದ ಪ್ರಪ್ರಥಮ ಗಡಿ ರಕ್ಷಕ ಯೋಧ ಯಾರು? ಭಾರತದ ಪುರಾಣಗಳ ಪ್ರಕಾರ, ದೇವಿ ಪಾರ್ವತಿಯ ಸ್ನಾನ ಗೃಹದ ಕಾವಲಿಗೆ ನಿಂತು ತನ್ನ ಪ್ರಾಣವನ್ನೇ ಅರ್ಪಿಸಿದ ಗಣಪತಿಯೇ ವಿಶ್ವದ ಸರ್ವಪ್ರಥಮ ಗಡಿ ರಕ್ಷಕ ಯೋಧನಿರಬೇಕು. ಗಡಿಗಳಲ್ಲಿ ಕಿಡಿ ಸಾಮಾನ್ಯವಾಗಿರುವ ಸಮಕಾಲೀನ ಸಂದರ್ಭದಲ್ಲಂತೂ ಗಡಿ ರಕ್ಷಣಾ ಪಡೆಗೆ ಇನ್ನಿಲ್ಲದ ಪ್ರಾಮುಖ್ಯತೆ.

ದೇಶದ ರಕ್ಷಣೆಯಲ್ಲಿ ಗಡಿ ಭದ್ರತೆಗೆ ಪ್ರಥಮ ಆದ್ಯತೆ. ಭಾರತದ ಗಡಿ ವಿಷಯವನ್ನು ನೋಡುವುದಾದರೆ – ಬಾಂಗ್ಲಾ, ಚೀನಾ, ಪಾಕ್, ನೇಪಾಳ, ಮ್ಯಾನ್ಮಾರ್ ಮತ್ತು ಭೂತಾನ್ ದೇಶಗಳೊಂದಿಗೆ ನಾವು 15 ಸಾವಿರ ಕಿ.ಮೀ. ಉದ್ದದ ಭೂ ಗಡಿಯನ್ನು ಮತ್ತು 3214 ಕಿ.ಮೀ. ಕರಾವಳಿ ಗಡಿಯನ್ನು ಹೊಂದಿದ್ದೇವೆ. ಇಷ್ಟು ವಿಸ್ತಾರವಾದ ಭೂ ಗಡಿ ಮತ್ತು ಕರಾವಳಿ ಗಡಿ ರಕ್ಷಣೆ ಸವಾಲಿನ ಕಾರ್ಯವೇ ಸರಿ!

ಸರ್ಕಾರ ಭೂಗಡಿಯ ರಕ್ಷಣೆಗಾಗಿ ಅಲ್ಲಲ್ಲಿ ಸಂಯೋಜಿತ ತನಿಖಾ ಠಾಣೆಗಳನ್ನು ಸ್ಥಾಪಿಸಿದೆ. ಆ ಠಾಣೆಗಳು ಅಸ್ಸಾಂ, ಮೇಘಾಲಯ, ಮಿಜೋರಾಂ, ತ್ರಿಪುರಾ, ಪಶ್ಚಿಮ ಬಂಗಾಳ (ಬಾಂಗ್ಲಾ), ಭೂತಾನ್ (ಜೈಗಾವ್), ಮ್ಯಾನ್ಮಾರ್ (ಮೋರೆಹ್ ಮತ್ತು ಜೋಚಾಚೌ), ನೇಪಾಳ (8), ಪಾಕ್ (ಅತ್ತಾರಿ–ವಾಘಾ ಮತ್ತು ಮುನಾಬಾವೋ) ಗಡಿಯಲ್ಲಿವೆ. ಇಂತಹ ತನಿಖಾಠಾಣೆಗಳಲ್ಲಿ ಸೈನಿಕರು ಕಾರ್ಯ ನಿರ್ವಹಿಸುವುದಿಲ್ಲ. ಈ ಕಠಿಣ ಕಾರ್ಯ ನಿರ್ವಹಣೆಗೆ 'ಗೋಡೆ'ಗಳೆಂದೇ ಹೆಸರಾದ ವಿಶೇಷ ಕಾರ್ಯಪಡೆಗಳಿವೆ.

ಬಾಂಗ್ಲಾ ಮತ್ತು ಪಾಕ್ ಗಡಿ ಕಾವಲಿಗೆ ಬಿಎಸ್‌ಎಫ್ ಪಡೆ ಇದ್ದರೆ ಭೂತಾನ್ ಮತ್ತು ನೇಪಾಳ ಗಡಿಯಲ್ಲಿ ಸಶಸ್ತ್ರ ಸೀಮಾಬಲವಿದೆ. ಚೀನಾ ಗಡಿ ರಕ್ಷಣೆಗೆ ಇಂಡೋ–ಟಿಬೆಟನ್ ಬಾರ್ಡರ್ ಪೊಲೀಸ್ ಮತ್ತು ಸ್ಪೆಶಲ್ ಫ್ರಾಂಟಿಯರ್ ಫೋರ್ಸ್ ಇವೆ. ಮ್ಯಾನ್ಮಾರ್ ಗಡಿಯಲ್ಲಿ ಅಸ್ಸಾಂ ರೈಫಲ್ಸ್ ಇರುತ್ತದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲೂ ಬಿಎಸ್‌ಎಫ್ ಪರಿಣತಿಯನ್ನು ಬಳಸಿಕೊಳ್ಳಲಾಗುತ್ತಿದೆ.

### ಗಡಿ ರಕ್ಷಣಾ ದಳ

ಅದು 1965ರ ಭಾರತ–ಪಾಕಿಸ್ತಾನ ಯುದ್ಧದ ಸಮಯ. ಸೈನಿಕರು ಯುದ್ಧರಂಗದಲ್ಲಿದ್ದಾಗ ಪಾಕ್ ಸೇನೆ ಕಚ್ ಪ್ರದೇಶದ ಕೆಲವು ಸ್ಥಳಗಳ ಮೇಲೆ ದಾಳಿ ಮಾಡಿತ್ತು.

ಭಾರತದ ಆಂತರಿಕ ಜಾಗೃತಿ ಮತ್ತು ಗಡಿ ರಕ್ಷಣೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಡಿಸೆಂಬರ್ 1, 1965ರಲ್ಲಿ ಗಡಿ ರಕ್ಷಣೆಯೇ ಪ್ರಮುಖ ಉದ್ದೇಶವಾಗಿರುವ 6 ದಳಗಳನ್ನು ರೂಪಿಸಿತ್ತು. ಅವುಗಳೆಂದರೆ: ಬಿಎಸ್‌ಎಫ್ (ಬಾರ್ಡರ್ ಸೆಕ್ಯೂರಿಟಿ ಫೋರ್ಸ್), ಕೇಂದ್ರ ಮೀಸಲು ಪೊಲೀಸ್ ದಳ (ಸಿಆರ್‌ಪಿಎಫ್), ಕೇಂದ್ರ ಔದ್ಯಮಿಕ ರಕ್ಷಣಾದಳ (ಸಿಐಎಸ್‌ಎಫ್), ಇಂಡೊ–ಟಿಬೆಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ), ರಾಷ್ಟ್ರೀಯ ರಕ್ಷಣಾದಳ (ಎನ್‌ಎಸ್‌ಜಿ) ಮತ್ತು ಸಶಸ್ತ್ರ ಸೀಮಾಬಲ (ಎಸ್‌ಎಸ್‌ಬಿ).

ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ಅಥವಾ ಗಡಿ ರಕ್ಷಣಾದಳ ಭಾರತದ ಅರೆಸೇನಾ ಪಡೆಯ ಒಂದು ಅಂಗ. ಇದರ ಮುಖ್ಯ ಗುರಿ ಭಾರತದ ಗಡಿಗಳ ರಕ್ಷಣೆ. ಬಿಎಸ್‌ಎಫ್ ಭಾರತ ಸರ್ಕಾರದ ಗೃಹ ಸಚಿವಾಲಯದ ನಿಯಂತ್ರಣದಲ್ಲಿರುವ ಕೇಂದ್ರ ಸಶಸ್ತ್ರ ಪೊಲೀಸ್ ದಳದ ಅಂಗಗಳಲ್ಲಿ ಒಂದು.

ಬಿಎಸ್‌ಎಫ್ ಆರಂಭವಾದಾಗ ಕೆಲವೇ ಬೆಟಾಲಿಯನ್‌ಗಳಿದ್ದವು. ಈಗ 186 ಬೆಟಾಲಿಯನ್‌ಗಳಲ್ಲಿ 2 ಲಕ್ಷದ 57 ಸಾವಿರದ 363 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಿಎಸ್‌ಎಫ್ ತನ್ನದೇ ಆದ ವಾಯುದಳ, ನೌಕಾದಳ, ಫಿರಂಗಿದಳ ಮತ್ತು ಕಮಾಂಡೋ ದಳಗಳನ್ನು ಹೊಂದಿದೆ. ದೇಶದ ಗಡಿ ರಕ್ಷಣೆಯಲ್ಲಿ ಮುಂಚೂಣಿಯಲ್ಲಿರುವ ಬಿಎಸ್‌ಎಫ್ ಜಗತ್ತಿನ ಅತ್ಯಂತ ದೊಡ್ಡ ಹಾಗೂ ವೃತ್ತಿಪರ ಗಡಿರಕ್ಷಣಾ ದಳಗಳಲ್ಲೊಂದಾಗಿದೆ.

ಬಿಎಸ್‌ಎಫ್‌ನ ಅಗಾಧ ಸಾಮರ್ಥ್ಯ 1971ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಹೊರಹೊಮ್ಮಿತ್ತು. ರಣರಂಗದಲ್ಲಿ ಸೈನ್ಯ ಕಾರ್ಯ ನಿರ್ವಹಿಸುವಾಗ ಬಿಎಸ್‌ಎಫ್ ಭಾರತದ ಪಶ್ಚಿಮ ಗಡಿಯ ಲೋಂಗೇವಾಲ ಎಂಬಲ್ಲಿ ಪಾಕ್ ಅತಿಕ್ರಮಣವನ್ನು ಯಶಸ್ವಿಯಾಗಿ ತಡೆಗಟ್ಟಿತ್ತು. ಬಿಎಸ್‌ಎಫ್‌ನ 120 ಯೋಧರು ತಮ್ಮ 4 ಹಾಕ್ ವಿಮಾನ, 1 ಎಚ್‌ಎಎಲ್ ಹೆಲಿಕಾಪ್ಟರ್ ಹಾಗೂ ಒಂದು ಜೀಪ್ ಮೌಂಟೆಡ್ ರೈಫಲ್‌ನೊಂದಿಗೆ ಪಾಕ್‌ನ 2000 ಸೈನಿಕರು ಮತ್ತು ಅವರ 40 ಟ್ಯಾಂಕುಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದರು. ಆ ಸಂಘರ್ಷದಲ್ಲಿ ಬಿಎಸ್‌ಎಫ್‌ನ ಇಬ್ಬರು ಯೋಧರು ಅಮರರಾದರೆ, ಪಾಕಿಸ್ತಾನ 200 ಸೈನಿಕರು ಮತ್ತು 36 ಟ್ಯಾಂಕುಗಳನ್ನು ಕಳೆದುಕೊಂಡಿತ್ತು. ಬಾಂಗ್ಲಾದೇಶದ ಹುಟ್ಟಿಗೆ ಕಾರಣವಾದ ಆ ಸೆಣಸಾಟ 'ಲೋಂಗೇವಾಲ ಕದನ' ಎಂದು ಹೆಸರು ಪಡೆಯಿತು.

### ಬಿಎಸ್‌ಎಫ್ ಹೊಣೆಗಾರಿಕೆಯೇನು?

- ಶಾಂತಿಕಾಲದಲ್ಲಿ ಬಿಎಸ್‌ಎಫ್, ಗಡಿ ಪ್ರದೇಶಗಳಲ್ಲಿ ಜನರಲ್ಲಿ ಸುರಕ್ಷತೆಯ ಅರಿವನ್ನು ಉಂಟು ಮಾಡುವ ಪ್ರಯತ್ನ ಮಾಡುತ್ತದೆ. ಗಡಿಗಳಲ್ಲಿ ಅಪರಾಧ ಚಟುವಟಿಕೆ, ಅನಧಿಕೃತ ನುಸುಳುವಿಕೆಗಳ ಮೇಲೆ ತೀವ್ರ ನಿಗಾ ವಹಿಸಿರುತ್ತದೆ. ಶಸ್ತ್ರಾಸ್ತ್ರ ಸೇರಿದಂತೆ ಕಳ್ಳಸಾಗಣೆ ಮತ್ತಿತರ ದುಷ್ಕೃತ್ಯಗಳನ್ನು ನಿಯಂತ್ರಿಸುತ್ತದೆ. ಇತ್ತೀಚೆಗೆ ಆಂತರಿಕ ರಕ್ಷಣೆ ಮತ್ತು ಅಶಾಂತಿಯನ್ನು ನಿಯಂತ್ರಿಸುವ ಕಾರ್ಯವನ್ನು ಕೂಡ ಬಿಎಸ್‌ಎಫ್‌ಗೆ ವಹಿಸಲಾಗುತ್ತಿದೆ.
- ಯುದ್ಧಕಾಲದಲ್ಲಿ ಬಿಎಸ್‌ಎಫ್ ನಿರ್ವಹಿಸಬೇಕಾದ ಕಾರ್ಯ ಅತ್ಯಂತ ನಿರ್ಣಾಯಕವಾದದ್ದು. ಯುದ್ಧ ಆರಂಭವಾಗುವ ಮುನ್ನ ಸೂಕ್ಷ್ಮ ಪ್ರದೇಶಗಳಲ್ಲಿದ್ದು ಪರಿಸ್ಥಿತಿಯನ್ನು ಅವಲೋಕಿಸುತ್ತಿರುತ್ತದೆ. ಯುದ್ಧ ಅನಿವಾರ್ಯ ಎನ್ನುವ ಸಂದರ್ಭದಲ್ಲಿ ಸೇನೆಗೆ ಜಾಗಕೊಟ್ಟು ತಾನು ಹಿಂದೆ ಸರಿಯುತ್ತದೆ. ಗಡಿಗಳಲ್ಲಿ ಹಾಗೂ ಯುದ್ಧರಂಗದಲ್ಲಿ ಸ್ಥಾಪಿಸಲಾಗುವ ವಾಯುನೆಲೆಗಳು, ಶಸ್ತ್ರಾಗಾರಗಳನ್ನು ಕಟ್ಟೆಚ್ಚರದಿಂದ ಕಾಯುತ್ತದೆ. ಸೂಕ್ಷ್ಮ ಸಂದರ್ಭಗಳಲ್ಲಿ ಸೇನೆಗೆ ಅಗತ್ಯ ನೆರವು ನೀಡುತ್ತದೆ.
- ಗಡಿಯೊಳಗೆ ನುಗ್ಗಲು ಯತ್ನಿಸುವ



## ಗಡಿ ರಕ್ಷಣೆಯ ಗುರಿ

ಬಿಎಸ್‌ಎಫ್‌ನಲ್ಲಿ ಈಗ 2.57 ಲಕ್ಷ ಸಿಬ್ಬಂದಿ ಇದ್ದಾರೆ. 'ಸಾವಿನವರೆಗೂ ಕಾರ್ಯ ತತ್ಪರನಾಗಿರು' ಎಂಬ ಗುರಿಯನ್ನು ಬಿಎಸ್‌ಎಫ್ ಹೊಂದಿದೆ. ಇಂತಹ ಪಕ್ಕಾ ವೃತ್ತಿಪರ ಸಂಸ್ಥೆಯ ಪ್ರಸಕ್ತ ಡೈರೆಕ್ಟರ್ ಜನರಲ್ ಎಸ್‌.ಎಸ್‌. ದೇಸಾಯ್ ಅವರಾಗಿದ್ದಾರೆ.

ಬಿಎಸ್‌ಎಫ್ ಪಾಲ್ಗೊಂಡಿದ್ದ ಕೆಲವು ಪ್ರಮುಖ ಕಾರ್ಯ ನಿಯೋಜನೆಗಳಲ್ಲಿ, 1971ರ ಇಂಡೋ–ಪಾಕ್ ಯುದ್ಧ, ಆಪರೇಶನ್ ಬ್ಲೂ ಸ್ಟಾರ್ (1984 – ಅಮೃತಸರ), ಆಪರೇಶನ್ ಬ್ಲಾಕ್ ಥಂಡರ್ (1980 – ಗೋಲ್ಡನ್ ಟೆಂಪಲ್), ಆಪರೇಶನ್ ವಿಜಯ್ (1999 – ಕಾರ್ಗಿಲ್ ಯುದ್ಧ).